ಓ.ಎಸ್ ನಂ.66/2020 ಪಿ.ಡಬ್ಲ್ಯೂ-2 (ಜಯಕುಮಾರ್)

**ಸಾಕ್ಷಿಯನ್ನು ದಿನಾಂಕಃ 19.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಂ ಎಸ್ ವಕೀಲರಿಂದಃ**

1. ನಾನು 10 ನೇ ತರಗತಿಯವರಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡದಲ್ಲಿ ಓದಲು ಬರೆಯಲು ಬರುತ್ತದೆ. ನಾನು ಸಹಿಯನ್ನು ಇಂಗ್ಲೀಷ್ ನಲ್ಲಿ ಮಾಡುತ್ತೇನೆ. ಇಂಗ್ಲೀಷ್ ನಲ್ಲಿ ಓದಲು ಬರೆಯಲು ಅಷ್ಟಾಗಿ ಬರುವುದಿಲ್ಲ ಸುಮಾರ ಓದುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರವು ಇಂಗ್ಲೀಷ್ ನಲ್ಲಿ ಇದ್ದು ಅದನ್ನು ಓದಿ ತಿಳಿದುಕೊಂಡಿರುತ್ತೇನೆ. ಸಾಕ್ಷಿಗೆ ನೀವು ಯಾವಾ ದಿನಾಂಕ ಯಾವ ಪತ್ರಕ್ಕೆ ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ದಿಃ29.06.2017 ರಂದು ಉಪ ನೊಂದಣಾಧಿಕಾರಿಯವರ ಕಛೇರಿಯಲ್ಲಿ ಕರಾರು ಪತ್ರಕ್ಕೆ ಸಹಿ ಮಾಡಿರುತ್ತೇನೆ. ಆ ದಿನ ಕರಿಯಣ್ಣ ಆತನ ಹೆಂಡತಿ ಮತ್ತು ಮಕ್ಕಳು, ರವಿಕುಮಾರ್ ಹಾಗೂ ದೇವಪ್ಪ ನವರು ಹಾಜರು ಇದ್ದರು. ಸದರಿ ದಿನ ಉಪ ನೊಂದಣಾಧಿಕಾರಿಯವರ ಕಛೇರಿಗೆ ಬರಲು ರವಿ ಕುಮಾರ್ ಮತ್ತು ಗೌರಮ್ಮ ರವರು ಕರೆಸಿದ್ದರು. ಆ ದಿನ ನಿಮ್ಮ ಸಮಕ್ಷಮ ಹಣದ ವ್ಯವಹಾರ ಆಗಿರುತ್ತದೆ ಎಂದರೆ ಸಾಕ್ಷಿಯು ಆ ದಿನ ರವಿಕುಮಾರ್ ರವರು 2 ಲಕ್ಷ ರೂಾಗಳನ್ನು ಕರಿಯಣ್ಣ ರವರಿಗೆ ನೀಡಿರುತ್ತಾರೆ ಎಂದು ನು ಡಿಯುತ್ತಾರೆ.ಸದರಿ ರವಿಕುಮಾರ್ ಮತ್ತು ಕರಿಯಣ್ಣ ರವರು ನಮ್ಮ ಗ್ರಾಮದವರೇ ಆಗಿರುತ್ತಾರೆ ಎಂದರೆ ಸರಿ. ಕರಾರು ಪತ್ರ ನೊಂದಣಿ ಆಗುವ ಪೂರ್ವದಲ್ಲಿ ಸದರಿ ರವಿ ಕುಮಾರ್ ಮತ್ತು ಕರಿಯಣ್ಣ ನವರ ಮಧ್ಯೆ ಮಾತುಕತೆಯಾದ ಬಗ್ಗೆ ನನಗೆ ತಿಳಿದಿರುವುದಿಲ್ಲ.

2. ನಾನು ನೊಂದಣಿ ಕಛೇರಿಯಲ್ಲಿ ಸಹಿ ಹಾಕಿದ ಪತ್ರದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಂಡಿರುತ್ತೇನೆ. ನಿಪಿ 2 ರಂತೆ ಕರಾರು ಪತ್ರವನ್ನು ಪತ್ರ ಬರಹಗಾರರಾದ

ಮಹದೇವ ರವರು ಬರೆದಿರುತ್ತಾರೆ ನಂತರ ಸಹಿಯನ್ನು ನೊಂದಣಿ ಕಛೇರಿಯಲ್ಲಿ ಮಾಡಿರುತ್ತೇನೆ. ನಾನು ಹೇಳಿದ ದಿನದಂದು ಯಾವುದೇ ಪತ್ರ ವ್ಯವಹಾರ ನಡೆದಿರುವುದಿಲ್ಲ ಆದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕರಿಯಣ್ಣ ರವರು ಸದರಿ ರವಿಕುಮಾರ್ ರವರಿಂದ ಸಾಲವನ್ನು ಪಡೆದುಕೊಂಡಿದ್ದರು ಅದರ ಬದ್ರತೆಗಾಗಿ ಪತ್ರವನ್ನು ಬರೆದು ಕೊಡುವ ಸಮಯ ಕ್ರಯದ ಕರಾರು ಪತ್ರ ಎಂದು ಮಾಡಿಕೊಳ್ಳಲಾಗಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ